**ದಿನಾಂಕ ಃ 20.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಿದೆ.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್.ಜಿ.ಎ. ವಕೀಲರಿಂದ ಃ**

ಆರೋಪಿ ಜಿ.ಟಿ. ಮಂಜುನಾಥ್ ನನಗೆ ಗೊತ್ತು, ಆರೋಪಿಯ ತಂದೆ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಗೊಲ್ಲಹಳ್ಳಿಯಲ್ಲಿರುವ ನೀರಿನ ಟ್ಯಾಂಕಿನ ಹತ್ತಿರ ಆರೋಪಿಯ ಮನೆ ಇದೆ. ಆರೋಪಿ ನನಗೆ 2 ವರ್ಷದಿಂದ ಪರಿಚಯ. ನಾನು ಚಿಕ್ಕ ತಿರುಪತಿ, ಲಕ್ಕೂರು, ಆಲಂಬಾಡಿ, ಗೊಲ್ಲಹಳ್ಳಿ, ಸಂಪಂಗೆರೆ ಬೇರೆಲ್ಲಾ ಕಡೆ ಸೊಪ್ಪಿನ ವ್ಯಾಪಾರಕ್ಕೆ ಹೋಗುತ್ತಿದ್ದೆ. ಆರೋಪಿಯು ನನ್ನ ಹತ್ತಿರ ಸೊಪ್ಪನ್ನು ಅವರ ಊರಿನಲ್ಲಿ ಖರೀದಿಸಿದ್ದಾರೆ. ಚಿಕ್ಕ ತಿರುಪತಿ ಸಂತೆಯಲ್ಲೂ ಆರೋಪಿ ನನ್ನ ಹತ್ತಿರ ಸೊಪ್ಪನ್ನು ಖರೀದಿಸಿದ್ದಾರೆ, ಆದ್ದರಿಂದ ಆರೋಪಿ ನನಗೆ ಪರಿಚಯ. ನಾನು ಆರೋಪಿಯ ಊರಿನಲ್ಲಿ 2021 ನೇ ಇಸವಿಯಲ್ಲಿ ಟೈಲರ್ ಮುರಳಿ ಮತ್ತು ಕೃಷ್ಣಾರವರ ಮನೆಯ ಗಾರೆ ಕೆಲಸ ಮಾಡಲು ನನ್ನ ತಂದೆಯ ಜೊತೆ ಹೋಗುತ್ತಿದ್ದೆ, ಆದ್ದರಿಂದ ಆರೋಪಿ ನನಗೆ ಪರಿಚಯ. ನನಗೆ ಆರೋಪಿ ಹೇಗೆ ಪರಿಚಯವಾದರು ಎಂದು ನನ್ನ ದೂರು, ನೊಟೀಸ್ ನಲ್ಲಿ ಹೇಳಿ ಬರೆಸಿಲ್ಲ.

ನಾನು 2019-2020 ರಿಂದ ಸೊಪ್ಪಿನ ವ್ಯಾಪಾರ ಮಾಡುತ್ತಿದೇನೆ. ನಾನು ದಿನಕ್ಕೆ ಸುಮಾರು 5 ರಿಂದ 6 ಸಾವಿರ ಸೊಪ್ಪಿನ ವ್ಯಾಪಾರದಿಂದ ಸಂಪಾದಿಸುತ್ತಿದ್ದೆ, ನಾನೇ ಬೇರೆ ಊರುಗಳಿಗೆ ಹೋಗುತ್ತಿದ್ದೆ. ಆರೋಪಿಯ ತಾಯಿಗೆ ಹುಷಾರಿಲ್ಲ ಎಂದು ದಿಃ 14.12.2021 ರಂದು ಆರೋಪಿ ನಮ್ಮ ಮನೆಯ ಹತ್ತಿರ ಬಂದು ನನ್ನನ್ನು ಹಣ ಕೇಳಿದರು.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

Sd/-
2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು